# ವೈವಿಧ್ಯಮಯ ಕೃಷಿ : ಯಶೋಗಾಥೆ

**ರೂಪಾ ಎಸ್. ಪಾಟೀಲ್ ಮತ್ತು ಅನ್ನಪೂರ್ಣ ನೀರಲಗಿ**
ಕೃಷಿ ವಿಜ್ಞಾನ ಕೇಂದ್ರ, ಶಿರಸಿ–581 401
☎: 9480410770 **ಮಿಂಚಂಚೆ:** patilroopas@uasd.in

**ಕೇವಲ ಒಂದೇ ಬೆಳೆಯನ್ನು ನೆಚ್ಚಿಕೊಂಡು ಮಾಡುವ ಕೃಷಿ ಎಲ್ಲ ಕಾಲಕ್ಕೂ ಲಾಭದಾಯಕವಾಗುತ್ತದೆ ಎಂದು ಹೇಳಲಾಗುವುದಿಲ್ಲ. ತರಕಾರಿ, ಕಾಯಿಪಲ್ಲೆ, ಹೂವು ಹಾಗೂ ಆಹಾರ ಬೆಳೆಗಳನ್ನು ಇರುವ ಜಮೀನಿನಲ್ಲಿಯೇ ಬೆಳೆದದ್ದಾರೆ ಒಂದು ಬೆಳೆ ವಿಫಲವಾದರು ಇನ್ನೊಂದು ಕೈಗೆ ಬರುತ್ತದೆ. ಹೀಗೆ ವೈವಿಧ್ಯಮಯ ಕೃಷಿ ಮಾಡಿ ಯಶಸ್ವಿಯಾದ ರೈತನ ಬಗ್ಗೆ ಲೇಖಕರು ಇಲ್ಲಿ ಟಿಪ್ಪಣಿ ಮಾಡಿದ್ದಾರೆ.**

ಶಿರಸಿ ತಾಲೂಕು ಬನವಾಸಿ ಸಮೀಪದ ಕಪಗೇರಿ ಗ್ರಾಮದ **ಶ್ರೀ ಹನುಮಂತಪ್ಪ ಭೀಮಪ್ಪ ಮಡ್ಲೂರು** ಇವರ ಜಮೀನನ್ನು ಒಮ್ಮೆ ವೀಕ್ಷಣೆ ಮಾಡಿದರೆ ಸಾಕು ಪದೇ ಪದೇ ನೋಡಬೇಕು ಎಂದೆನಿಸುತ್ತದೆ. ಕೇವಲ ಮೂರು ಎಕರೆ ಜಮೀನಿನಲ್ಲಿ 60 ಕ್ಕೂ ಹೆಚ್ಚು ವೈವಿಧ್ಯಮಯ ಬೆಳೆಗಳನ್ನು ಕೇವಲ ಮಳೆಯಾಶ್ರಯದಲ್ಲಿ ಬೆಳೆದು ಯಶಸ್ವಿ ಕೃಷಿಕರಾಗಿ ಹೊರ ಹೊಮ್ಮಿದ್ದಾರೆ.

ಮೂಲತಃ ಹಿರೇಕೆರೂರು ತಾಲೂಕಿನ ಮಡ್ಲೂರು ಗ್ರಾಮದವರಾದ ಇವರು 1980 ರಲ್ಲಿ ಕೂಲಿ ಅರಸಿ ಸಂಸಾರ ಸಮೇತ ಬನವಾಸಿಗೆ ಬಂದರು. ನಂತರ ಕೂಡಿಟ್ಟ ಹಣದಿಂದ ಕಪಗೇರಿ ಯಲ್ಲಿ 3 ಎಕರೆ ಜಮೀನನ್ನು ಖರೀದಿಸಿ ಮೊದಮೊದಲು ಕೇವಲ ಹತ್ತಿ, ಮೆಕ್ಕೆಜೋಳ, ರಾಗಿ ಹೀಗೆ ಹಲವು ಬೆಳೆ ಬೆಳೆಯಲಾರಂಭಿಸಿದರು. ನಂತರದ ದಿನಗಳಲ್ಲಿ ಕೃಷಿ ಲಾಭದಾಯಕವಾಗಲು ಇನ್ನೂ ಹೆಚ್ಚಿನ ಬೆಳೆಗಳ ಅಳವಡಿಕೆಯ ಅಗತ್ಯತೆಯನ್ನು ಮನಗಂಡು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಾರ್ಗದರ್ಶನದ ಮೇರೆಗೆ ಕಳೆದ ಒಂದು ದಶಕದಿಂದ ತರಕಾರಿ ಕೃಷಿ ಆರಂಭಿಸಿದರು.

**ತರಕಾರಿ ತಂದ ಖುಷಿ**

ಇದ್ದ 3 ಎಕರೆ ಜಮೀನಿನಲ್ಲೆ ಅಚ್ಚುಕಟ್ಟಾಗಿ ಕೃಷಿ ಯೋಜನೆ ಸಿದ್ಧಪಡಿಸಿ ತರಕಾರಿಗಳಾದ ಬೀನ್ಸ್, ಹೀರೆಕಾಯಿ,



ಮೂಲಂಗಿ, ಬದನೆ, ಟೋಮ್ಯಾಟೊ, ಸೌತೆಕಾಯಿ, ಮೀಟರ್ ಅಲಸಂಧಿ, ಮೆಣಸಿನಕಾಯಿ, ಆಲೂಗಡ್ಡೆ, ಹಾಗಲಕಾಯಿ, ಬೆಂಡೆಕಾಯಿ, ತೊಂಡೆ, ಸೊಪ್ಪು ಹೀಗೆ ಹಲವಾರು ಬೆಳೆಗಳನ್ನು 20 ಗುಂಟೆ ಜಾಗದಲ್ಲಿ ಬೆಳೆದಿದ್ದಾರೆ. ಈ ತರಕಾರಿಯಿಂದಲೇ ಆದಾಯ ರೂ. 60,000 ರಿಂದ ರೂ. 70,000 ಮುಟ್ಟಿದೆ, ಅದೂ ಕೇವಲ 2 ರಿಂದ 3 ತಿಂಗಳಲ್ಲಿ ಮಾತ್ರ.

**ಡೇರೆ ಹೂವಿನ ಸೊಗಸು**

ಜಮೀನಿನಲ್ಲಿ ಓಡಾಡಲು ಬಿಟ್ಟು ಕೊಂಡಿರುವ ಜಾಗದ ಎರಡೂ ಬದಿಯಲ್ಲಿ ಸುಮಾರು 450 ಕ್ಕೂ ಹೆಚ್ಚು ಡೇರೆ ಗಿಡಗಳನ್ನು ಬೆಳೆಸಿದ್ದಾರೆ. ಆಗಸ್ಟ್ – ಸೆಪ್ಟೆಂಬರ್ ತಿಂಗಳಿನಲ್ಲಿ ಅರಳಿ ನಿಂತಿರುವ ಈ ಹೂ ಗಳನ್ನು ನೋಡುವುದೇ ಒಂದು ಸೊಗಸು. ಬರೀ ಈ ಒಂದು ಡೇರೆ ಹೂವಿನ ಮಾರಾಟ ದಿಂದ ರೂ. 10,000 ದಿಂದ 15,000 ಆದಾಯ ಗಳಿಸುತ್ತಿದ್ದಾರೆ.

ತರಕಾರಿ ಹಾಗೂ ಹೂ ಬೆಳೆಗಳೊಂದಿಗೆ ಇತರೆ ಬೆಳೆಗಳಾದ ಶೇಂಗಾ, ಮೆಕ್ಕೆಜೋಳ, ಸಾಸಿವೆ, ಹತ್ತಿ, ಜೋಳ, ರಾಗಿ, ಸೂರ್ಯಕಾಂತಿ, ನವಣೆ. ಸಾವೆ, ಹೀಗೆ ಇನ್ನೂ ಹಲವಾರು ಬೆಳೆ ಬೆಳೆದಿದ್ದಾರೆ. ಜಮೀನಿನ ಸುತ್ತಲೂ ಕೃಷಿ ಅರಣ್ಯ ಮರಗಳಾದ ಸಾಗವಾನಿ, ಹೊನ್ನೆ, ಮತ್ತಿ, ಗ್ಲಿರಿಸೀಡಿಯಾ ಮುಂತಾದ ಮರಗಳಿವೆ.

ಇಷ್ಟೇ ಅಲ್ಲದೇ ಕೃಷಿ ಪೂರಕ ಚಟುವಟಿಕೆಗಳಾದ ಹೈನುಗಾರಿಕೆ, ಕೋಳಿ ಸಾಕಾಣಿಕೆ, ತುಡುವೆ ಜೇನು ಪೆಟ್ಟಿಗೆ ಹಾಗೂ ಕುರಿ ಸಾಕಾಣಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**ಯಶಸ್ಸಿನ ಗುಟ್ಟು**

- ಕೇವಲ ಒಂದೆರೆಡೆ ಬೆಳೆಗಳನ್ನು ನಂಬದೇ 2 ರಿಂದ 3 ತಿಂಗಳ ಅವಧಿಗೆ ಸೂಕ್ತವಾದ ಎಲ್ಲ ಬೆಳೆಗಳನ್ನು ಬೆಳೆದಿದ್ದಾರೆ.
- ಯಾವುದೇ ಮಧ್ಯವರ್ತಿಗಳ ಸಹಾಯವಿಲ್ಲದೇ ತರಕಾರಿಗಳನ್ನು ಹೂವನ್ನು ಸಮೀಪದ ಶಿರಸಿ, ಸೊರಬ, ಜಡೆ ಸಂತೆಯಲ್ಲಿ ಸ್ವತಃ ಮಾರಾಟ ಮಾಡಿ ಲಾಭಗಳಿಸುತ್ತಿದ್ದಾರೆ.
- ಇದೆಲ್ಲಕ್ಕಿಂತ ಹೆಚ್ಚಾಗಿ ಕುಟುಂಬದವರ ಸಹಕಾರ, ಕೆಲಸದಲ್ಲಿನ ಶ್ರದ್ಧೆ, ಕೃಷಿ ಮೇಲಿನ ಇವರ ಪ್ರೀತಿ ಇವರನ್ನು ಯಶಸ್ವಿ ಕೃಷಿಕರನ್ನಾಗಿಸಿದೆ.

**ಜಮೀನಿನ ಸಂಪೂರ್ಣ ಸದ್ಬಳಕೆ ಮಾಡಿ ವೈವಿಧ್ಯಮಯ ಕೃಷಿಗೆ ಒತ್ತು ಕೊಟ್ಟ ಇವರನ್ನರಸಿ ಹಲವಾರು ಪ್ರಶಸ್ತಿಗಳು ಬಂದಿವೆ. ಅವುಗಳಲ್ಲಿ ಕೃಷಿ ಸಾಧಕ ಪ್ರಶಸ್ತಿ, ಉತ್ತಮ ಕೃಷಿಕ, ಬಹುಬೆಳೆ ವೀರ, ಶ್ರೇಷ್ಠ ತೋಟಗಾರಿಕಾ ರೈತ, ಕೃಷಿ ಕಂಠೀರವ, ಅನ್ವೇಶಕ ರೈತ, ಕೃಷಿ ಭೀಮ ಮುಂತಾದವು.** ಪ್ರತಿ ವರ್ಷ ತಮ್ಮ ಜಮೀನಿಗೆ ಭೇಟಿ ಕೊಟ್ಟ ರಾಜ್ಯದ ಸಾವಿರಾರು ರೈತರಿಗೆ ಕೃಷಿ ಅನುಭವವನ್ನು ಹಂಚುತ್ತಿದ್ದಾರೆ. ಕೃಷಿಯಲ್ಲಿ ಆಸಕ್ತಿ ಹೊಂದಿದವರೆಲ್ಲ ನೋಡಲೇ ಬೇಕಾದ ಒಂದು ಮಾದರಿ ಜಮೀನು ಎಂದರೆ ತಪ್ಪಾಗಲಿಕ್ಕಿಲ್ಲ.



ಶ್ರೀ ಹನುಮಂತಪ್ಪ ಭೀಮಪ್ಪ ಮಡ್ಲೂರು ಅವರ ವೈವಿಧ್ಯಮಯ ಕೃಷಿ ಇತರರಿಗೆ ಪ್ರೇರಣೆಯಾಗಿದೆ. ಆಸಕ್ತರು ಸಂಪರ್ಕಿಸಬೇಕಾದ ವಿಳಾಸ.

**ಶ್ರೀ ಹನುಮಂತಪ್ಪ ಭೀಮಪ್ಪ ಮಡ್ಲೂರು**
**ಕಪಗೇರಿ, ಸೊರಬ ರಸ್ತೆ**
**ಬನವಾಸಿ, ಶಿರಸಿ ತಾಲೂಕು**
**ಮೊಬೈಲ್ ಸಂಖ್ಯೆ : 7353008733**

*****

**ಲೇಖನಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳಿದ್ದಲ್ಲಿ..............**

ಕೃಷಿ ಮುನ್ನಡೆ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳನ್ನು ಸಾಧ್ಯವಾದಷ್ಟು ವೈಜ್ಞಾನಿಕ ಪರಿಶೀಲನೆಗೆ ಒಳಪಡಿಸಿರುತ್ತಾದರೂ ಕೆಲವೊಮ್ಮೆ ಓದುಗರಿಗೆ ಹೆಚ್ಚಿನ ಮಾಹಿತಿಗಾಗಿ ಅಥವಾ ಸ್ಪಷ್ಟೀಕರಣಕ್ಕಾಗಿ ಕೆಲವು ಪ್ರಶ್ನೆಗಳು ಉದ್ಭವಿಸಬಹುದು. **ಆಯಾ ಲೇಖನಗಳಿಗೆ ಆಯಾ ಲೇಖಕರೇ ಜವಾಬ್ದಾರರು.** ಆದ್ದರಿಂದ ಓದುಗರಲ್ಲಿ ಒಂದು ವಿನಂತಿ. ತಾಂತ್ರಿಕ ಮಾಹಿತಿ ಅಥವಾ ಲೇಖನಗಳನ್ನು ಕುರಿತು ಪ್ರಶ್ನೆಗಳಿದ್ದರೆ **ಆಯಾ ಲೇಖಕರನ್ನೇ ನೇರವಾಗಿ ಸಂಪರ್ಕಿಸಬೇಕು.** ಈ ಕಾರಣಕ್ಕಾಗಿಯೇ ಪ್ರತಿಯೊಂದು ಲೇಖಕರ ದೂರವಾಣಿ ಸಂಖ್ಯೆ, ಮಿಂಚಂಚೆ ಹಾಗೂ ಅಂಚೆ ವಿಳಾಸಗಳನ್ನು ಪ್ರಕಟಿಸಿರುತ್ತದೆ.

ಧನ್ಯವಾದಗಳು,

– ಸಂ.